ಶ್ರೀ ಪ್ರಕಾಶ ಬಿ ಹುಕ್ಕೇರಿ ಮಾನ್ಯ ಸಚಿವರು ಅಕ್ಟೋಬರ್‌ನಲ್ಲಿ 37 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು, ಇದುವರೆಗೆ ಟೆಂಡರ್ ಏಕೆ ಆಗಿಲ್ಲ? ಅದರ ಬಗ್ಗೆ ತಾವು ಹೇಳುತ್ತಿಲ್ಲ

ಅಧ್ಯಕ್ಷರು ಆಯಿತು ಬಿಡಿ, ಅದು ಬೇರೆ ಪ್ರಶ್ನೆ ಏಕೆ ಸುಮ್ಮನೆ ಕೇಳುತ್ತೀರಿ?

ಶ್ರೀ ಪ್ರಕಾಶ ಬಿ ಹುಕ್ಕೇರಿ ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಅವಕಾಶ ಕೊಡಿ ಸಾರ್ ಅಕ್ಟೋಬರ್‌ನಲ್ಲಿ ಹಣ ಬಿಡುಗಡೆಯಾದರೂ ಇನ್ನು ಟೆಂಡರ್ ಪ್ರೋಸೆಸ್ ಏಕೆ ಮುಗಿದಿಲ್ಲ ಇದರ ಬಗ್ಗೆ ತಾವು ಕಾಳಜಿ ವಹಿಸಬೇಕು ಅಲ್ಲವೆ?

ಅಧ್ಯಕ್ಷರು ಮಾನ್ಯ ಸದಸ್ಯರು ದಯಮಾಡಿ ತಾವು ಆರ್ಧ ಮಾಡಿಕೊಳ್ಳಬೇಕು ಇದು ಅದಕ್ಕೆ ಸಂಬಂದಪಟ್ಟ ಉಪ ಪ್ರಶ್ನೆಯಲ್ಲ ನಾನು ಅನೇಕ ಸಾರಿ ಹೇಳುತ್ತಿದ್ದರೂ ಕೂಡ ನೀವು ಹಿರಿಯ ಸದಸ್ಯರು ಈ ರೀತಿ ಮಾಡಿದರೆ ಹೇಗೆ?

ಡಾ ವಿ ಎಸ್ ಆಚಾರ್ಯ ಎಲ್ಲಾ ಪ್ರಯತ್ನವನ್ನು ಮಾಡಲಾಗುವುದು

ಆಸ್ಪತ್ರೆಗಳ ಸುಧಾರಣೆ ಹಾಗೂ ಮೇಲ್ದರ್ಜೆಗೇರಿಸುವುದು

33 (206) ಬಸವರಾಜು ಎ ಎಸ್ (ಅರಸೀಕೆರೆ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಹಾಸನ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಆಸ್ಪತ್ರೆ ಸಾರ್ವಜನಿಕ ಆಸ್ಪತ್ರೆಗಳ ಸಂಖ್ಯೆ ಎಷ್ಟು , (ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ನೀಡುವುದು) ,

ಆ) ಈ ಎಲ್ಲಾ ಆಸ್ಪತ್ರೆಗಳಿಗೂ ಸಮರ್ಪಕ ವೈದ್ಯರ, ತಂತ್ರಜ್ಞರ ಸಿಬ್ಬಂದಿಗಳು ಇರುವರೇ ,

ಇ) ಅರಸೀಕೆರೆ ಜೆ ಸಿ ಆಸ್ಪತ್ರೆಯನ್ನು 150 ಹಾಸಿಗೆಗಳುಳ್ಳದ್ದಾಗಿ ಪರಿವರ್ತಿಸಲಾಗಿದೆಯೇ ,

ಈ) ಹಾಗಿದ್ದಲ್ಲಿ, ಹಾಲಿ ಇರುವ ಸಿಬ್ಬಂದಿಗಳು ಮತ್ತು 150 ಹಾಸಿಗೆಯ, ಆಸ್ಪತ್ರೆಗೆ 100 ಹಾಸಿಗೆಯುಳ್ಳ ಸಿಬ್ಬಂದಿ ಸೌಲಭ್ಯ ಸಾಕಾಗುವುದೇ,

ಉ) ಅರಸೀಕೆರೆ ಕ್ಷೇತ್ರ ಮತ್ತು ತಾಲ್ಲೂಕಿನ ಎಷ್ಟು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗಿದೆ ,

ಊ) ಮೇಲಿನ ಸದರಿ ಆಸ್ಪತ್ರೆಗಳಲ್ಲಿರುವ ಸಿಬ್ಬಂದಿ ಮತ್ತು ವೈದ್ಯರ ಕೊರತೆ ನೀಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ,

ಋ) ಸುವರ್ಣ ಕರ್ನಾಟಕ ಯೋಜನೆಯಡಿ ಹೊಸದಾಗಿ ಆಸ್ಪತ್ರೆ ತೆರೆಯುವ ಯೋಜನೆ ಸರ್ಕಾರದಲ್ಲಿದೆಯೇ ,

ಎ) ಇದ್ದಲ್ಲಿ, ಇದು ಯಾವ ಹಂತದಲ್ಲಿದೆ ,

ಏ) ಅರಸೀಕೆರೆ ಆಸ್ಪತ್ರೆ ಅಂಬುಲೆನ್ಸ್ ವಾಹನವನ್ನು ಹೊಸದಾಗಿ ಕೊಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ , (ತಿಳಿಸುವುದು) ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಆ)

ವಿಧಾನಸಭಾ ಕ್ಷೇತ್ರ	ಸಾರ್ವಜನಿಕ ಆಸ್ಪತ್ರೆ	ಸ ಆರೋಗ್ಯ ಕೇಂದ್ರ	ಪ್ರಾ. ಆರೋಗ್ಯ ಕೇಂದ್ರ	ಪ್ರಾ. ಆರೋಗ್ಯ ಘಟಕ
ಬೇಲೂರು	1	–	7	4
ಸಕಲೇಶಪುರ	1	–	13	8
ಹಾಸನ	1	–	9	5
ಅರಕಲಗೂಡು	1	1	8	6
ಹೊಳೆನರಸೀಪುರ	1	3	14	6
ಶ್ರವಣಬೆಳಗೊಳ	1	3	10	10
ಗಂಡಸಿ	–	2	10	8
ಅರಸೀಗೆರೆ	1	1	7	3

ಆ) ಕೆಲವು ವೈದ್ಯರು, ತಂತ್ರಜ್ಞರು ಹಾಗೂ ಸಿಬ್ಬಂದಿಗಳ ಕೊರತೆ ಇರುತ್ತದೆ

ಇ) ಹೌದು

ಈ) ಹೆಚ್ಚುವರಿ ಸಿಬ್ಬಂದಿ ಮಂಜೂರು ಮಾಡಲಾಗಿದ್ದು ನೇಮಕಾತಿ ಕಾರ್ಯ ಪ್ರಕ್ರಿಯೆಯಲ್ಲಿದೆ

ಉ) ಈಗಾಗಲೇ ಮೇಲ್ದರ್ಜೆಗೇರಿಸಿರುವ ಜೆ ಸಿ ಪುರ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕಟ್ಟಡ ಕಟ್ಟಲು ಕ್ರಮ ತೆಗೆದುಕೊಳ್ಳಲಾಗಿದೆ

ಊ) ವಿಶೇಷ ನೇರ ನೇಮಕಾತಿ ಸಮಿತಿಯಿಂದ 500 ವೈದ್ಯಾಧಿಕಾರಿಗಳನ್ನು ಎರಡು ಹಂತಗಳಲ್ಲಿ ಭರ್ತಿ ಮಾಡಲು ಅನುಮತಿ ನೀಡಿದ್ದು, ಇದರಲ್ಲಿನ ಮೊದಲ ಹಂತವಾಗಿ 250 ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಅಂತಿಮ ಹಂತದಲ್ಲಿದ್ದು ಆಯ್ಕೆ ಪಟ್ಟಿ ಪ್ರಕಟಿಸಿದ ನಂತರ ಎರಡನೇ ಹಂತದಲ್ಲಿ 250 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದು ಕೊಳ್ಳಲಾಗುವುದು

2807 ಅರೆ ವೈದ್ಯಕೀಯ ಸಿಬ್ಬಂದಿಗಳನ್ನು ಭರ್ತಿ ಮಾಡುವ ಸಲುವಾಗಿ ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ ಅರ್ಜಿ ಆಹ್ವಾಹಿಸಲಾಗಿದ್ದು ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇರೆಗೆ ತುಂಬಲಾಗುವುದು ಇದಲ್ಲದೇ ಗುತ್ತಿಗೆ ಆಧಾರದ ಮೇರೆಗೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ

ಋ) ಮತ್ತು ಎ) ಹೊಸ ಆಸ್ಪತ್ರೆ ತೆರೆಯುವ ಉದ್ದೇಶ ಇರುವುದಿಲ್ಲ ಈ ವರ್ಷ 63 ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು 100 ಹಾಸಿಗೆಗಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ

ಏ) ಆಂಬ್ಯುಲೆನ್ಸ್ ವಾಹವನ್ನು ಹೊಸದಾಗಿ ನೀಡಲಾಗಿರುತ್ತದೆ

ಶ್ರೀ ಎ ಎಸ್ ಬಸವರಾಜು ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಸಮರ್ಪಕವಾದ ಉತ್ತರ ದೊರೆತ್ತಿಲ್ಲವೆಂದು ನನ್ನ ಭಾವನೆ ಅರಸೀಕೆರೆ ತಾಲ್ಲೂಕಿನಲ್ಲಿರತಕ್ಕಂಥ ಆಸ್ಪತ್ರೆಯಲ್ಲಿ ಸಮರ್ಪಕವಾದಂಥ ಡಾಕ್ಟರ್‌ಗಳಾಗಲೀ ಸಿಬ್ಬಂದಿಗಳಾಗಲೀ ಯಾರೂ ಇಲ್ಲಿ ಇಲ್ಲ ಆದರೆ, ನಾನು ಮಾನ್ಯ ಆರೋಗ್ಯ ಸಚಿವರಿಗೆ ಅನೇಕ ಬಾರಿ ತಿಳಿಸಿದರೂ ಕೂಡ ಇವತ್ತಿನವರೆಗೆ ಕಾರ್ಯಗತ ಮಾಡಿಲ್ಲ ಅದನ್ನು ಯಾವ ಕಾರಣಕ್ಕಾಗಿ ಮಾಡಿಲ್ಲವೆಂದು ತಿಳಿಸುತ್ತೀರಾ? ಅರೀಸೀಕೆರೆ ತಾಲ್ಲೂಕು ಪ್ರಮುಖವಾದಂಥ ವ್ಯಾಪಾರಿ ಕೇಂದ್ರ, ಜಂಕ್ಷನ್ ಇದೆ, ಇಲ್ಲಿ ಇರತಕ್ಕಂಥ ಜೆ ಸಿ ಆಸ್ಪತ್ರೆಯಲ್ಲಿ ಸರಿಯಾದಂಥ ತಜ್ಞರು ಇಲ್ಲ ಮೂಳೆ ಡಾಕ್ಟರುಗಳು ಇಲ್ಲ ಫಿಜಿಷಿಯನ್ ನಾಗಭೂಷಣ ರವರು ಸುಮಾರು ಎರಡು ವರ್ಷಗಳ ಕಾಲ ರಜೆ ಹಾಕಿದ್ದಾರೆ ಜೊತೆಗೆ ಅವರು ವಿ ಅರ್ ಎಸ್ ಕೇಳಿದ್ದಾರೆ ಇವತ್ತಿನವರೆಗೆ ಅವರಿಗೆ ವಿ ಅರ್ ಎಸ್ ಕೊಟ್ಟಿಲ್ಲ ಅವರಿಗೆ ಯಾವ ಕಾರಣಕ್ಕಾಗಿ ವಿ ಅರ್ ಎಸ್ ಕೊಟ್ಟಿಲ್ಲವೋ ಗೊತ್ತಿಲ್ಲ ಇವತ್ತಿನ ದಿವಸ ನರ್ಸಗಳು ಕೂಡ ಬಹಳ ಕಡಿಮೆ ಇದ್ದಾರೆ 20 ಜನ ನರ್ಸಗಳು ಇರುವಂಥ ಕಡೆ 10 ಜನ

ಮಾತ್ರ ನರ್ಸಗಳು ಇದ್ದಾರೆ ದಾದಿಗಳ ಬಗ್ಗೆ ಹೇಳುವುದಾದರೆ, ನಾಲ್ಕು ಜನ ಬೇಕಾಗಿರತಕ್ಕಂದ ಜಾಗದಲ್ಲಿ ಕೇವಲ ಇಬ್ಬರು ದಾದಿಗಳು ಮಾತ್ರ ಇದ್ದಾರೆ ಅದು ಯಾವ ಕಾರಣಕ್ಕಾಗಿ ಅವರನ್ನು ಅಲ್ಲಿಗೆ ಕೊಟ್ಟಿಲ್ಲವೋ ಗೊತ್ತಿಲ್ಲ ಅಲ್ಲಿ ಡಿ–ಗ್ರೂಪ್‌ನ ನೌಕರರು ರಾತ್ರಿ ಹೊತ್ತು ಕುಡಿದು ನರ್ತನ ಮಾಡುತ್ತಿರುತ್ತಾರೆ ಅವರು ನರ್ತನ ಮಾಡುತ್ತಿರಬೇಕಾದರೆ ಕೆಲವು ರೋಗಿಗಳಿಗೆ ಅದು ಮನರಂಜನೆಯ ಕಾರ್ಯಕ್ರಮವಾಗುತ್ತದೆ, ಕೆಲವು ರೋಗಿಗಳಿಗೆ ಅದು ನಿಜವಾಗಲೂ ತೊಂದರೆಯಾಗುತ್ತದೆ ರಂಗಸ್ವಾಮಿ ಮತ್ತು ಸೋಮೇಗೌಡ ಇವರಿಬ್ಬರನ್ನು ಡಿಸ್‌ಮಿಸ್ ಮಾಡಿ ಇಲ್ಲ ಅಂದ್ರೆ ಸಸ್ಪೆಂಡ್ ಮಾಡಿ ಇವರನ್ನು ಹೊರಗಡೆ ಹಾಕಿ ಎಂದು ನಮ್ಮ ಸಚಿವರಿಗೆ ಹೇಳಿದ್ದೆ ಇವತ್ತಿನವರೆಗೆ ಏನೂ ಮಾಡಿಲ್ಲ ಈ ಮಟ್ಟಕ್ಕೆ ಇರತಕ್ಕಂಥ ಜೆ ಸಿ ಆಸ್ಪತ್ರೆ ತುಂಬಾ ಹದಗೆಟ್ಟಿದೆ ಹಾಗೇಯೇ ಜೆ ಸಿ ಆಸ್ಪತ್ರೆಯ ಬಗ್ಗೆ

ಅಧ್ಯಕ್ಷರು ಮಾನ್ಯ ಬಸವರಾಜುರವರೆ, ನೀವೇನು ಪ್ರಶ್ನೆ ಕೇಳುತ್ತೀದ್ದಿರೋ ಹೇಗೆ ಈ ರೀತಿ ಆದರೆ ಮುಗಿಸಲಿಕ್ಕೆ ಆಗುವುದಿಲ್ಲ

ಶ್ರೀ ಎ ಎಸ್ ಬಸವರಾಜು ಅರಸೀಕೆರೆ ಆಸ್ಪತ್ರೆಗೆ 150 ಹಾಸಿಗೆಗಳು ಮಂಜೂರೂ ಆಗಿದ್ದರೂ ಅಲ್ಲಿ ಇವತ್ತು 97 ಹಾಸಿಗೆಗಳು ಮಾತ್ರ ಇವೆಯಲ್ಲ ಯಾವ ಕಾರಣಕ್ಕಾಗಿ ಇದುವರೆಗೆ ಮಾಡಿಲ್ಲ?

ಅಧ್ಯಕ್ಷರು ಏಕೆಂದರೆ ಅವರ ನೋವುಗಳೇ ಜಾಸ್ತಿ ಆಗಿವೆ

ಶ್ರೀ ಎ ಎಸ್ ಬಸವರಾಜು ದಿನಾಂಕ 30–3–92 ರಲ್ಲಿ ಮಂಜೂರು ಆಗಿ 15 ವರ್ಷಗಳಾಗಿದ್ದರೂ ಇನ್ನು 150 ಹಾಸಿಗೆಗಳನ್ನು ಸಂಪೂರ್ಣವಾಗಿ ಏಕೆ ಹಾಕಿಲ್ಲ? ಅಲ್ಲಿಗೆ ಸಮರ್ಪಕವಾದಂಥ ಸಿಬ್ಬಂದಿಗಳನ್ನು ಏಕೆ ಹಾಕಿಲ್ಲವೆಂದು ನಾನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ ನನ್ನ ಕೆಲವು ಪ್ರಶ್ನೆಗಳಿಗೆ ಮಾನ್ಯ ಸಚಿವರು ಇನ್ನು ಸಮರ್ಪಕವಾದ ಉತ್ತರ ಕೊಟ್ಟಿಲ್ಲ ಅರಿಸೀಕೆರೆಯಲ್ಲಿ ಇವತ್ತು ಆಂಬ್ಯೂಲೆನ್ಸ್ ಇಲ್ಲ ಆಂಬ್ಯೂಲೆನ್ಸ್ ಕೊಡಿ ಎಂದು ಹಿಂದೆ ಮಾನ್ಯ ಚೆಲುವರಾಯ ಸ್ವಾಮಿಯವರು ಇದ್ದಾಗ ಕೇಳಿದ್ದರೂ ಕೊಡಲಿಲ್ಲ ಆದರೆ ಮಾನ್ಯ ಮಲ್ಯರವರ ಎಂ ಪಿ ಫಂಡ್‌ನಲ್ಲಿ ಒಂದು ಆಂಬ್ಯೂಲೆನ್ಸ್ ಬಂತು ಆದರೆ ಆಂಬ್ಯೂಲೆನ್ಸ್ ಬಂದರೂ ಕೂಡ ಅದಕ್ಕೆ ಚಾಲಕ ಇಲ್ಲ

ಅಧ್ಯಕ್ಷರು ಆಯಿತು ಎಲ್ಲಾ ಕೊಡಿಸುತ್ತಾರೆ ಕುಳಿತುಕೊಳ್ಳಿ

ಶ್ರೀ ಎ ಎಸ್ ಬಸವರಾಜು ಕೆಲವು ಆಸ್ಪತ್ರೆಗಳಲ್ಲಿ ಚಾಲಕರಿಲ್ಲ, ಚಾಲಕರಿದ್ದರೆ ಆಂಬ್ಯೂಲೆನ್ಸ್ ಇಲ್ಲ ಯಾವ ಕಾರಣಕ್ಕೋಸ್ಕರ ಈ

ರೀತಿಯಾಗುತ್ತದೆಯೋ ಗೊತ್ತಿಲ್ಲ ಇವತ್ತು ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲ ಮಾತ್ರೆ ಕೊಡತಕ್ಕಂಥ ಕಾಂಪೌಂಡರ್ ಇಲ್ಲ ಈ ಮಟ್ಟಕ್ಕೆ ಆಸ್ಪತ್ರೆಗಳು ಇರಬೇಕಾದರೆ ಅಲ್ಲಿ ಬಹಳಷ್ಟು ಸಮಸ್ಯೆಗಳು ಇವೆ ಆ ಎಲ್ಲಾ ಸಮಸ್ಯೆಗಳಿಗೆ ಸರಿಯಾದಂಥ ಉತ್ತರ ಕೊಟ್ಟಿಲ್ಲ ನನ್ನ ಎಲ್ಲಾ ಪ್ರಶ್ನೆಗಳಿಗೆ ದಯಮಾಡಿ ಉತ್ತರ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಆರ್ ಅಶೋಕ್ ಈಗಾಗಲೇ ಅರಿಸೀಕೆರೆ ಆಸ್ಪತ್ರೆಯನ್ನು 150 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲಾಗಿದೆ ಸದಸ್ಯರು ಮರೆತ್ತಿದ್ದಾರೆ, ಈಗ ಅದಕ್ಕೆ ಬೇಕಾದಂಥ ಮೇಲ್ದರ್ಜೆಗೇರಿಸಿದಂಥ ಆಸ್ಪತ್ರೆಗೆ ಕಟ್ಟಡ ಕಟ್ಟುವುದಕ್ಕೂ ಹಣ ಬಿಡುಗಡೆ ಮಾಡಲಾಗಿದೆ ಕಟ್ಟಡ ಕೆಲಸ ನಡೆಯುವುದಕ್ಕೆ ಈಗಾಗಲೇ ನಾವು ವ್ಯವಸ್ಥೆಯನ್ನು ಮಾಡಿದ್ದೇವೆ ಈಗ ರಾಜ್ಯದಲ್ಲಿ ಏನು ಡಾಕ್ಟರ್‌ಗಳ ಕೊರತೆ ಇದೆ, ಅದಕ್ಕೆ ಈ ಸಮ್ಮಿಶ್ರ ಸರಕಾರ ಬಂದ ಮೇಲೆ ಸುಮಾರು 500 ಡಾಕ್ಟರ್‌ಗಳನ್ನು ನೇಮಕಾತಿ ಮಾಡಬೇಕೆಂದು ನಿರ್ಧರಿಸಿ, ವಿಶೇಷ ನೇಮಕಾತಿಯಡಿಯಲ್ಲಿ ಸರ್ಕಾರ ಈಗಾಗಲೇ ನೇಮಕಾತಿಯ ಪ್ರಕ್ರಿಯೆಯನ್ನು ಮಾಡಿದೆ ಈಗಾಗಲೇ 250 ಜನ ನೇಮಕಾತಿಗಾಗಿ ಸಂದರ್ಶನ ನಡೆದು ಅಂತಿಮ ಹಂತದಲ್ಲಿದ್ದು ಇನ್ನು 10–15 ದಿವಸದಲ್ಲಿ ನೇಮಕಾತಿಯ ಪ್ರಕ್ರಿಯೆ ಮುಗಿಯುತ್ತದೆ, ಆ ಸಂದರ್ಭದಲ್ಲಿ ಎಲ್ಲಿಲ್ಲಿ ಸ್ಪೆಷಲಿಸ್ಟ್ ಪೋಸ್ಟ್ ಖಾಲಿ ಇದೆ ಆ ಸಂದರ್ಭದಲ್ಲಿ ತುಂಬುವಂಥ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ ಮತ್ತೆ ಅದರ ಜೊತೆಗೆ 250 ಡಾಕ್ಟರ್ ಹುದ್ದೆಗಳ ನೇಮಕಾತಿಗೆ ಆದೇಶವನ್ನು ಕೊಟ್ಟಿದ್ದೇವೆ ಒಟ್ಟು 500 ಜನರನ್ನು ತುಂಬಿಕೊಳ್ಳುತ್ತಿದ್ದೇವೆ ಹಾಗೆಯೇ, 2807 ಅರೆ ವೈದ್ಯಕೀಯ ಸಿಬ್ಬಂದಿ ಫ್ಯಾರಾ ಮೆಡಿಕಲ್ ಸ್ಟ್ಯಾಫ್ ನೇಮಕಾತಿಗೆ ಅರ್ಜಿಗಳನ್ನು ಕರೆಯಲಾಗಿದೆ ಈ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ನಾವು ಅವಕಾಶ ಮಾಡಿ ಕೊಡುತ್ತಿದ್ದೇವೆ ಮತ್ತೆ ಸುವರ್ಣ ಕರ್ನಾಟಕ ಯೋಜನೆಯಡಿಯಲ್ಲಿ ಹೊಸದಾಗಿ PHC ಪ್ರಾರಂಭ ಮಾಡಲಾಗುತ್ತದೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ ಸದ್ಯಕ್ಕೆ ಈ ರೀತಿಯಾದ ಪ್ರಸ್ತಾವನೆಗಳು ಸರ್ಕಾರದ ಮುಂದಿಲ್ಲ ಹೊಸದಾಗಿ PHC ಪ್ರಾರಂಭ ಮಾಡಬೇಕಾದರೆ, 30 ಸಾವಿರ ಜನ ಸಂಖ್ಯೆ ಇರಬೇಕೆಂದು ಕೇಂದ್ರ ಸರ್ಕಾರದ ನಿಯಮವಿದೆ ಆದರೆ, ಈಗ ಹೊಸದಾಗಿ PHC ಪ್ರಾರಂಭ ಮಾಡಬೇಕೆಂಬ ಉದ್ದೇಶ ಸರ್ಕಾರದ ಮುಂದಿಲ್ಲ ಆದರೆ, 30 ಅಥವಾ 50 ಹಾಸಿಗೆ ಹೊಂದಿರುವಂಥ ಸರ್ಕಾರದ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ 100 ಹಾಸಿಗೆ ಇರತಕ್ಕಂಥ ವ್ಯವಸ್ಥೆ

ಮಾಡಬೇಕೆಂದು ಈಗಾಗಲೇ ಸರ್ಕಾರ ತೀರ್ಮಾನ ಮಾಡಿ ಇದಕ್ಕೆ ಸಂಬಂಧಪಟ್ಟಂತಹ ಆದೇಶವನ್ನು ಸಹ ಹೊರಡಿಸಿದ್ದೇವೆ ಹಾಗೆಯೇ, 63 ತಾಲ್ಲೂಕು ಆಸ್ಪತ್ರೆಗಳನ್ನು ಅಪ್ ಗ್ರೇಡ್ ಮಾಡುವುದರ ಜೊತೆಗೆ ಅದಕ್ಕೆ ಬೇಕಾಗಿರತಕ್ಕಂಥ ಕಟ್ಟಡವನ್ನು ನಿರ್ಮಾಣ ಮಾಡುವುದಕ್ಕೆ ಬೇಕಾಗಿರತಕ್ಕಂಥ ಹಣವನ್ನೂ ಸಹ ಬಿಡುಗಡೆ ಮಾಡುತ್ತೇವೆ ಅರಸೀಕೆರೆ ಆಸ್ಪತ್ರೆಗೆ ಆಂಬ್ಯುಲೆನ್ಸ್ ವಾಹನವನ್ನು ಕೇಳಿದ್ದಾರೆ ಆದರೆ, ಈಗಾಗಲೇ 2005ರಲ್ಲಿ ಒಂದು ಆಂಬ್ಯುಲೆನ್ಸ್ ವಾಹನವನ್ನು ನೀಡಿದ್ದೇವೆ ಆದ್ದರಿಂದ, ಉಳಿದಂಥ ನೇಮಕಾತಿಗಳನ್ನು ಮಾಡುವುದಕ್ಕಾಗಿ ಸರ್ಕಾರ ಈಗಾಗಲೇ ಇಂಟರ್‌ವ್ಯೂ ಕಾಲ್ ಮಾಡಿದೆ ಈ ಹುದ್ದೆಗಳನ್ನು ನೇಮಕಾತಿ ಮಾಡಿದ ನಂತರ ಮಾನ್ಯ ಸದಸ್ಯರು ಕೇಳಿರತಕ್ಕಂಥ ಹುದ್ದೆಗಳನ್ನು ತುಂಬುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಈಗ ಸಮಸ್ಯೆ ಇರತಕ್ಕಂಥದು ಕಾಂಟ್ರಾಕ್ಟ್ ಡಾಕ್ಟರ್ಸ್‌ದ್ದು ಗುತ್ತಿಗೆ ಆಧಾರದ ಮೇಲೆ MBBS ಮಾಡಿರತಕ್ಕಂಥ ಡಾಕ್ಟರ್‌ಗಳನ್ನು ಆಸ್ಪತ್ರೆಗೆ ಕೊಡುತ್ತಿಲ್ಲ ಮತ್ತೆ ಗುತ್ತಿಗೆಯ ಮೇಲೆ ಬಂದಿರತಕ್ಕಂಥ ಡಾಕ್ಟರ್‌ಗಳ್ಯಾರು ಮೂರ್ನಾಲ್ಕು ತಿಂಗಳ ಮೇಲೆ ಇರುವುದಿಲ್ಲ ಜೊತೆಗೆ BSIM ಡಾಕ್ಟರ್‌ಗಳನ್ನು ಹಾಕುತ್ತಿದ್ದೀರಿ Night dutyಗೆ ಹಾಕಿ ಪ್ರಿಯಾರಿಟಿ ಮೇಲೆ ಎಂದು ನೈಟ್ ಬರುವ ಪೇಷೆಂಟ್ಸ್ ಯಾರು? ಆದೇಶವನ್ನು ಮಾಡಿದ್ದೀರಿ ಎಮರ್ಜೆನ್ಸಿ ಇರುವಂಥವರು ಪೇಸೆಂಟ್‌ಗಳು ರಾತ್ರಿ ಸಮಯದಲ್ಲಿ ಬರುತ್ತಾರೆ Without MBBS ಇರುವಂತಹವರನ್ನು ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ನೈಟ್ ಡ್ಯೂಟಿ ಮಾಡಿ ಎಂದು ತಾವು ತೀರ್ಮಾನ ತೆಗೆದುಕೊಂಡು ಈ ರಾಜ್ಯದಲ್ಲಿರತಕ್ಕಂಥ ಜನರನ್ನು ಏನು ಮಾಡಬೇಕೆಂದ್ದೀರಿ ಎನ್ನತಕ್ಕಂಥದನ್ನು ಹೇಳಬೇಕಾಗುತ್ತದೆ ಇವತ್ತಿನ ದಿವಸ ಜಿಲ್ಲೆಗಳಲ್ಲಿರತಕ್ಕಂಥ ಆಸ್ಪತ್ರೆಗಳಿಗೆ MBBS ಮಾಡಿರತಕ್ಕಂಥ ಒಬ್ಬ ಡಾಕ್ಟರ್ ಕೂಡ ಗುತ್ತಿಗೆ ಆಧಾರದ ಮೇಲೆ ಬರುತ್ತಿಲ್ಲ ಆದ್ದರಿಂದ ಇದನ್ನು ಯಾವರೀತಿಯಾಗಿ ಇತ್ಯರ್ಥ ಮಾಡುತ್ತೀರಿ ಎಂಬುದನ್ನು ತಾವು ಹೇಳಬೇಕು ಇದು ಕೇವಲ ಅರಸೀಕೆರೆಯ ಸಮಸ್ಯೆಯಲ್ಲ ಇದು ಇಡೀ ರಾಜ್ಯದಲ್ಲಿರತಕ್ಕಂಥ ಸಮಸ್ಯೆಯಾಗಿದೆ ಇವತ್ತಿನದಿವಸ MBBS ಮಾಡಿರತಕ್ಕಂಥ ಡಾಕ್ಟರ್‌ಗಳಿಲ್ಲ ಮತ್ತೆ BSIM ರವರನ್ನು ಇವರು ಅಲೋ ಮಾಡಿದ್ದಾರೆ ಇವತ್ತಿನದಿವಸ ಎಲ್ಲಾ ಪೋಸ್ಟ್‌ಗಳಿಗೆ BSIM ರವರು ಅರ್ಜಿ ಹಾಕಿಕೊಂಡು ಬರುತ್ತಿದ್ದಾರೆ ಅವರಿಗೆ ಸರ್ಜರಿ ಮತ್ತು ಪೋಸ್ಟ್ ಮಾರ್ಟ್‌ಮ್ ಮಾಡುವುದಕ್ಕೂ ಸಹ ಬರುವುದಿಲ್ಲ

ಎಮರ್ಜೆನ್ಸಿ ಕೇಸ್‌ಗಳು ರಾತ್ರಿಯ ಸಮಯದಲ್ಲಿ ಹೆಚ್ಚಾಗಿ ಬರುತ್ತವೆ ಆದ್ದರಿಂದ, ಅವರನ್ನು ನೈಟ್ ಡ್ಯೂಟಿಗೆ ಹಾಕಿ ಎಂದು ತಾವು ಆದೇಶ ಕೊಟ್ಟಿದ್ದೀರಿ ಈ ರೀತಿಯಾದರೆ ರಾಜ್ಯದ ಗತಿ ಏನು?

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಎಲ್ಲೆಲ್ಲಿ MBBS ಮಾಡಿರತಕ್ಕಂಥ ಡಾಕ್ಟರ್‌ಗಳು ಬರುತ್ತಿಲ್ಲವೋ ಅಂಥ ಕಡೆ ಮಾತ್ರ ಆಯುರ್ವೇದ ಡಾಕ್ಟರ್‌ಗಳನ್ನು ತೆಗೆದುಕೊಳ್ಳಲಾಗುತ್ತಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ತಾವೂ ಎಲ್ಲೂ ಕೂಡ ಮಾಡಿಲ್ಲ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಇವತ್ತಿನ ದಿವಸ ಎಲ್ಲಾ ಕಡೆ BSIM ಮಾಡಿರತಕ್ಕಂಥವರೆ ಇದ್ದಾರೆ How did you allow them to practice in the Hospital? ಇವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಮೆಡಿಕಲ್ ಕೌನ್ಸಿಲ್‌ನ ಪರ್ಮಿಷನ್ ಇದೆಯೇ ಎನ್ನತಕ್ಕಂಥದ್ದನ್ನು ತಾವು ಹೇಳಬೇಕು ಇದಕ್ಕೆ Medical Council ಒಪ್ಪಿಕೊಂಡಿದೆಯೇ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಆಯುರ್ವೇದ ಡಾಕ್ಟರ್‌ಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಮೆಡಿಕಲ್ ಕೌನ್ಸಿಲ್‌ನವರು ಒಪ್ಪಿಕೊಂಡಿದ್ದಾರೆಯೇ?

(ಗೊಂದಲ)

ಅಧ್ಯಕ್ಷರು ಒಂದೇ ಸಾರಿ ಎಲ್ಲರೂ ಮಾತನಾಡಿದರೆ ಹೇಗೆ? ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ಎಲ್ಲಾ ಪಕ್ಷದ ಮುಖಂಡರ ಸಭೆಯನ್ನು ನಿಮ್ಮ ಛೇಂಬರ್‌ನಲ್ಲಿ ಕರೆದು ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ ಏನೇನು ಕ್ರಮ ತೆಗೆದುಕೊಳ್ಳಬೇಕಾಗಿದೆಯೋ ಆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಿ ಇದು ಇಡೀ ರಾಜ್ಯ ವ್ಯಾಪ್ತಿಯ ಸಮಸ್ಯೆಯಾಗಿದೆ ಆದ್ದರಿಂದ ಮುಂಖಡರ ಸಭೆ ಮಾಡಿ ಆದಷ್ಟುಬೇಗ ಕ್ರಮ ತೆಗೆದುಕೊಳ್ಳಿ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಮೆಡಿಕಲ್ ಕೌನ್ಸಿಲ್ ಒಪ್ಪಿಗೆ ಕೊಡದೆ ಅವರು ಕೆಲಸ ಮಾಡುವುದಕ್ಕೆ ಬರುವುದಿಲ್ಲ

ಅಧ್ಯಕ್ಷರು ಮಾನ್ಯ ಮಾಧುಸ್ವಾಮಿಯವರೆ, ನಾನು ಹೇಳುವುದೇನೆಂದರೆ, ಅವರಿಗೆ ಅಲೋ ಮಾಡುತ್ತಾರೆಯೋ ಅಥವಾ ಇಲ್ಲವೋ ಮತ್ತು ಏತಕ್ಕೆ ಈ ರೀತಿಯಾಗಿ ಮಾಡಿದ್ದೀರಿ ಎನ್ನತಕ್ಕಂಥ ವಿಷಯಗಳೆಲ್ಲವನ್ನು ತಾವೆಲ್ಲರೂ ಒಂದು ಸಭೆ ಸೇರಿ ಮಾತನಾಡಿ ಈ ಒಂದು ಉದ್ದೇಶಕ್ಕಾಗಿಯೇ ಎಲ್ಲಾ

ಪಕ್ಷದ ಮುಖಂಡರನ್ನು ಕರೆದು ಸಭೆ ಮಾಡಿ ಎಂದು ನಾನು ಹೇಳಿದ್ದೇನೆ ಈಗ ಸುಮ್ಮನೆ ಗಲಾಟೆ ಮಾಡಿದರೆ ಸಮಸ್ಯೆ ಪರಿಹಾರವಾಗುತ್ತದೆಯೇ? ಪರಿಹಾರವಾಗುವುದಾದರೆ ಮಾಡಿ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಇವತ್ತಿನದಿವಸ ಎಲ್ಲಾ ಕಡೆ ಆಯುರ್ವೇದಿಕ್ ಡಾಕ್ಟರ್‌ಗಳನ್ನು ಹಾಕಿ ಜನರುಗಳನ್ನು ಕೊಲ್ಲಬೇಕೆಂದು ಮಾಡಿದ್ದೀರಾ?

ಶ್ರೀ ಎ ಎಸ್ ಬಸವರಾಜು ಮಾನ್ಯ ಅಧ್ಯಕ್ಷರೆ, ಅರಸೀಕೆರೆಯಲ್ಲಿರುವ ಜೆ ಸಿ ಆಸ್ಪತ್ರೆಯಲ್ಲಿ 150 ಹಾಸಿಗೆಗಳನ್ನಾಗಿ ಮಾರ್ಪಾಡು ಮಾಡಿ ಎಂದು ಪ್ರಸ್ತಾವನೆ ಕೊಟ್ಟು 15 ವರ್ಷಗಳಾಗಿವೆ ಆದರೆ, ಇದೂವರೆಗೂ ಮಾಡಿಲ್ಲ ಸಿಬ್ಬಂದಿ ವರ್ಗ ಹಾಕುವುದಕ್ಕೆ ಇನ್ನೂ ಎಷ್ಟು ವರ್ಷ ಬೇಕು?

ಅಧ್ಯಕ್ಷರು ಮಾನ್ಯ ಬಸವರಾಜುರವರೆ, ನಿಮ್ಮ ಪ್ರಶ್ನೆ ಮುಗಿದಿದೆ ಮಾನ್ಯ ಮಂತ್ರಿಗಳು ಎಲ್ಲರನ್ನೂ ಕರೆದು ಈ ವಿಷಯದ ಬಗ್ಗೆ ಚರ್ಚೆ ಮಾಡಿ ಇದಕ್ಕೊಂದು ನೀತಿಯನ್ನು ರೂಪಿಸುತ್ತಾರೆ ದಯಮಾಡಿ ತಾವು ಕುಳಿತುಕೊಳ್ಳಿ

ಶ್ರೀ ಎ ಎಸ್ ಬಸವರಾಜು ನನ್ನ ಕ್ಷೇತ್ರದಲ್ಲಿ ನಾಲ್ಕು ಆಸ್ಪತ್ರೆಗಳಿವೆ ಇವುಗಳನ್ನು ಮೇಲ್ದರ್ಜೆಗೇರಿಸಬೇಕೆಂದು ಮೂರು ವರ್ಷಗಳಿಂದ ಕೇಳುತ್ತಿದ್ದೇವೆ ಆದರೆ, ಇನ್ನೂ ಮಾಡಿಲ್ಲ ದಯವಿಟ್ಟು ಅದನ್ನು ಮಾಡಿಕೊಡುವುದಕ್ಕೆ - ಹೇಳಿ

ಅಧ್ಯಕ್ಷರು ಎಲ್ಲದಕ್ಕೂ ಅಸ್ತು ಎಂದು ಹೇಳಿಬಿಡಿ ಹೋಗಲಿ ಆಗಲಾದರೂ ಸಮಾಧಾನವಾಗುತ್ತಾರೆ ವಿಷಯವಂತೂ ಮುಕ್ತಾಯ–ವಾಗುವುದಿಲ್ಲ ಮುಂದಿನ ಪ್ರಶ್ನೆ ಮಾನ್ಯ ಬಸವರಾಜ ರಾಯರೆಡ್ಡಿಯವರದು ಅವರು ಬಂದಿಲ್ಲ ಈಗ ಮುಂದಿನ ಪ್ರಶ್ನೆ ಮಾನ್ಯ ಸಿದ್ದು ಸಾವದಿ ಅವರದು

ತಾಲ್ಲೂಕ ಮಟ್ಟದ ಎಲ್ಲಾ ಆಸ್ಪತ್ರೆಗಳಿಗೆ ಸಿಬ್ಬಂದಿಗಳನ್ನು ಒದಗಿಸುವ ಕುರಿತು

36 (140) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಆರೋಗ್ಯ ಮತ್ತು - ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಜಮಖಂಡಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಚಿಕಿತ್ಸಾ ಕೇಂದ್ರ ಹಾಗೂ ಇತರೆ ಆಸ್ಪತ್ರೆಗಳ ಸಂಖ್ಯೆ ಎಷ್ಟು, (ಸಂಪೂರ್ಣ - ವಿವರ ಒದಗಿಸುವುದು),

ಆ) ಈ ಎಲ್ಲಾ ಚಿಕಿತ್ಸಾ ಕೇಂದ್ರಗಳಲ್ಲಿರುವ ಸಿಬ್ಬಂದಿಗಳ ಕೊರತೆ ಎಷ್ಟು,